ಒ ಎಸ್ 268/2022 ಪಿ.ಡಬ್ಲ್ಯೂ 1

ಇಂದು ದಿಃ 17.03.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಟಿ ಜಿ ಎಂ ವಕೀಲರಿಂದಃ

ಗಂಗಮ್ಮ ನನ್ನ ತಾಯಿ. ಗಂಗಮ್ಮನವರು ನಡೆದಾಡಲು ಸಾಧ್ಯವಿದೆ ಎಂದರೆ ಸರಿಯಲ್ಲ. ವಾದಿಗೆ ನಡೆದಾಡಲು ಆಗುವುದಿಲ್ಲ, ಕಣ್ಣು ಕಾಣುವುದಿಲ್ಲ ಮತ್ತು ಕಿವಿ ಕೇಳಿಸುವುದಿಲ್ಲ ಎಂಬ ಬಗ್ಗೆ ವೈದ್ಯಕೀಯ ದಾಖಲೆ ಹಾಜರು ಮಾಡಿಲ್ಲ. ವಾದಿ ಚೆನ್ನಾಗಿದ್ದರೂ ಸಹ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರುತ್ತದೆ ಎಂದು ನಾನು ಅಧಿಕಾರ ಪತ್ರ ಬರೆಸಿಕೊಂಡು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಈ ಕೇಸನ್ನು ಜಮೀನಿನ ವಿಚಾರದಲ್ಲಿ ಸಲ್ಲಿಸಿದ್ದಾರೆ. ಸದರಿ ಸರ್ವೆ ನಂಬರ್ 219 ರ ಆಸ್ತಿ 1 ಎ 31 ಗುಂಟೆ ಜಮೀನಿಗೆ ಕೇಸು ದಾಖಲಿಸಿದ್ದಾರೆ. ದಾವಾ ಜಮೀನನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ದಾಖಲಾತಿಗಳನ್ನು ನೋಡಿಲ್ಲ. ಸರ್ವೆ ನಂಬರ್ 219 ರಲ್ಲಿ 1 ಎ 31 ಗುಂ ಜಮೀನು ಇದೆ. ಅದು ಎಷ್ಟು ಪೋಡಾಗಿದೆ ಎಂಬ ವಿಚಾರ ನನಗೆ ಇತ್ತೀಚೆಗೆ ತಿಳಿಯಿತು. ವಾದಿ ದೊರೆಸ್ವಾಮಿ, ನೀಲಮ್ಮ ಮತ್ತು ಅವರ ಮಕ್ಕಳ ವಿರುದ್ಧ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ.

ದಾವಾ ಸ್ವತ್ತು ಮೂಲತಃವಾಗಿ ಯಾರಿಗೆ ಸೇರಿದ್ದು ಎಂದರೆ ಮರಿದೇವರಿಗ ಸೇರಿದ ಜಮೀನಾಗಿತ್ತು. ಮರಿದೇವಪ್ಪನ ತಂದೆ ಹೆಸರು ಮಾದಪ್ಪ. ಮಾದಪ್ಪನ ತಂದೆ ಹೆಸರು ನನಗೆ ಗೊತ್ತಿಲ್ಲ. ಮಾದಪ್ಪನನ್ನು ಪುಟ್ಟಮಾದಪ್ಪ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾದಪ್ಪನಿಗೆ ಮೂರು ಜನ ಮಕ್ಕಳು, ಅವರೆಂದರೆ ನಿಂಗಪ್ಪ , ಮರಿದೇವಪ್ಪ ಮತ್ತು ಪುಟ್ಟಮಾದಪ್ಪ. ಅವರು ಮೂವರು ಈಗ ಮೃತಪಟ್ಟಿರುತ್ತಾರೆ. ಮಾದಪ್ಪನಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಮಾದಪ್ಪನಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಮೇಲೆ ಹೇಳಿದ ಮೂವರು ಅಣ್ಣತಮ್ಮಂದಿರು ಭಾಗ ಮಾಡಿಕೊಂಡು ಮರಿದೇವಪ್ಪನಿಗೆ ಜಮೀನು ಬಂದಿತ್ತು. ನಿಂಗಪ್ಪ, ಪುಟ್ಟಮಾದಪ್ಪ ಮತ್ತು ಮರಿದೇವಪ್ಪನಿಗೆ ಯಾವೆಲ್ಲಾ ಭಾಗದ ಆಸ್ತಿ ಹೋಗಿದೆ ಎಂದು ನನಗೆ ಗೊತ್ತಿಲ್ಲ. ಆ ಮೂರು ಜನ ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ ಆಗ ನಾವು ಚಿಕ್ಕವರಾಗಿದ್ದೆವು.

ನಿಂಗಪ್ಪನ ಹೆಂಡತಿ ಮಲ್ಲಮ್ಮ ಅವರಿಗೆ ಇಬ್ಬರು ಮಕ್ಕಳು ಅವರೆಂದರೆ ಮಹದೇವಪ್ಪ ಮತ್ತು ಗಂಗಮ್ಮ. ದೊರೆಸ್ವಾಮಿ ಮಹದೇವಪ್ಪನ ಮಗ. 3-5 ನೇ ಪ್ರತಿವಾದಿಗಳು 1 ನೇ ಪ್ರತಿವಾದಿ ಮಕ್ಕಳು ಮತ್ತು 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ. ನಿಂಗಪ್ಪನ ಮಗ ಮಹದೇವಪ್ಪ ಅವರ ಹೆಂಡತಿ ಗುರುಸಿದ್ದಮ್ಮ.

ನಾನು ದಾವೆಯಲ್ಲಿ ಹೇಳಿದ ವಂಶವೃಕ್ಷ ವಾಸ್ತವಕ್ಕೆ ಸರಿಹೊಂದುವುದಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪನಿಗೆ ಮಹದೇವಪ್ಪ ಮತ್ತು ಗಂಗಮ್ಮ ಇಬ್ಬರೇ ಮಕ್ಕಳು ಬೇರೆ ಯಾರೂ ಇಲ್ಲ. ನಿಂಗಪ್ಪನಿಗೆ ಬಂದ ಆಸ್ತಿಯನ್ನು ಆಗಲೇ ಮಾರಾಟ ಮಾಡಿದ ಕಾರಣ ನಮಗೆ ಯಾವ ಸರ್ವೆ ನಂಬರ್ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಪುಟ್ಟಮಾದಪ್ಪನಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿದ್ದರು. ದಾವಾ ಆಸ್ತಿ ಮರಿದೇವಪ್ಪನಿಗೆ ಸೇರಿದ ಆಸ್ತಿ ಎಂದರೆ ಸರಿ. ನಂತರ ಅವರಿಂದ ದೊರೆಸ್ವಾಮಿಗೆ ಬಂತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಗಂಗಮ್ಮ ಮತ್ತು ಮಹದೇವಪ್ಪನಿಗೆ ಬಿಟ್ಟುಕೊಟ್ಟಿದ್ದರು. ಆದರೆ ಆ ಬಗ್ಗೆ ಬರವಣಿಗೆ ದಾಖಲೆ ಇಲ್ಲ. ಆ ಕಾರಣ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಯ 4 ನೇ ಪ್ಯಾರಾದಲ್ಲಿ ಹೇಳಿದ ವಿವರಗಳು ಸುಳ್ಳು ಎಂದರೆ ಸರಿಯಲ್ಲ. ಜಂಟಿ ಖಾತೆ ಇದ್ದ ಬಗ್ಗೆ ದಾಖಲೆ ಇಲ್ಲದ ಕಾರಣ ಕೊಟ್ಟಿಲ್ಲ. ರೆವಿನ್ಯೂ ಅಧಿಕಾರಿಗಳ ಜೊತೆ ಸೇರಿ ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎಂದು ವಾದಿಗೆ ತಿಳಿಯಿತು. ಆ ಮೊದಲು ಆರ್ ಟಿ ಸಿ ಮರಿದೇವಪ್ಪನ ಹೆಸರಿನಲ್ಲಿತ್ತು. ಮರಿದೇವಪ್ಪನ ಹೆಸರಿನಲ್ಲಿ 20 ವರ್ಷಗಳಿಗಿಂತ ಹೆಚ್ಚು ಕಾಲದ ಆರ್ ಟಿ ಸಿ ಇದೆ.

ನಿಂಗಪ್ಪ ಅವರ ಅಣ್ಣನ ಮೇಲೆ ಭಾಗ ಬೇಕು ಎಂದು ದಾವೆ ಸಲ್ಲಿಸಿಲ್ಲ. ಅದೇ ರೀತಿ ಮಹದೇವಪ್ಪನ ಮಕ್ಕಳು ಆಸ್ತಿಯಲ್ಲಿ ಭಾಗ ಕೇಳಿ ದಾವೆ ಸಲ್ಲಿಸಿಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ, ಮಹದೇವಪ್ಪನವರಿಗಾಗಲೀ ಮತ್ತು ಅವರ ತಂದೆ ನಿಂಗಪ್ಪನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಾದಪ್ಪನವರಿಂದ ಬಂದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ದಾವಾ ಸ್ವತ್ತನ್ನು ಹೊಡೆದುಕೊಳ್ಳಲು ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾರಾಟ ಮಾಡುವಾಗ ಮರಿದೇವಪ್ಪನ ಹೆಸರಿನಲ್ಲಿತ್ತು ಮತ್ತು ನಂತರ ಅದು ದೊರೆಸ್ವಾಮಿಗೆ ಬಂತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖಾತೆಗಳು 1 ನೇ ಪ್ರತಿವಾದಿ ಹೆಸರಿನಲ್ಲಿದ್ದ ಕಾರಣ ದಾವಾ ಆಸ್ತಿಯನ್ನು 6 ನೇ ಪ್ರತಿವಾದಿಗೆ ಕಾನೂನು ಬದ್ಧವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮರಿದೇವಪ್ಪ ಮತ್ತು ನಿಂಗಪ್ಪನ ಜಂಟಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಎಂ ಆರ್ ಪ್ರತಿಯನ್ನು ನೋಡಿದ್ದೇನಾ ಎಂದರೆ ಜಮೀನು ಕೊಟ್ಟ ನಂತರ ತಿಳಿಯಿತು. ಮಾದಪ್ಪನ ಮಕ್ಕಳು ವಿಭಾಗವಾದ ನಂತರ ಬೇರೆ ಬೇರೆ ಇದ್ದರು ಎಂದರೆ ಸರಿಯಲ್ಲ. ಅವರೆಲ್ಲರೂ ಒಟ್ಟಾಗಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ಮಾದಪ್ಪ.

ದಾವಾ ಸ್ವತ್ತು ಮೂಲತಃ ನಿಂಗಪ್ಪನಿಗೆ ಸೇರಿದ ಸ್ವತ್ತಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮರಿದೇವಪ್ಪನವರ ಸ್ವಂತ ಆಸ್ತಿಯಾದ ಕಾರಣ ದೊರೆಸ್ವಾಮಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನ್ನ ತಾಯಿಗೆ ವಿಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕ್ರಯಪತ್ರಕ್ಕೂ ಮತ್ತು ವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಯಾವತ್ತೂ ಸಹ ದೊರೆಸ್ವಾಮಿ ಬಳಿ ಹೋಗಿ ವಿಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ಕಾರಣ ಇಲ್ಲದಿದ್ದರೂ ಸಹ ನನ್ನ ತಾಯಿ ಸುಳ್ಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಆಗಿರದ ಕಾರಣ ಪ್ರತಿವಾದಿಗಳ ಮೇಲೆ ಸಲ್ಲಿಸಿದ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.